ಸಾಕ್ಷಿಯನ್ನು ದಿಃ 08-08-2019 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು 2 ನೇ ಪ್ರತಿವಾದಿ ಪರ ಶ್ರೀ ಎಸ್ ಜೆ ವಕೀಲರಿಂದಃ**

ನನ್ನ ತಂದೆ ಉಗ್ರಪ್ಪ ನವರಿಗೆ ಅಣ್ಣ ತಮ್ಮ ಅಕ್ಕ ತಂಗಿಯರು ಇರಲಿಲ್ಲ. ಹೊಟ್ಟೆ ಕರಿಯಪ್ಪ ಎಂದರೆ ನನ್ನ ತಾತನ ಅಣ್ಣ. ನನ್ನ ತಾತ ಹಾಗೂ ಹೊಟ್ಟೆ ಕರಿಯಪ್ಪ ವಿಭಾಗ ಮಾಡಿಕೊಂಡಿದ್ದರು. ಆ ಬಗ್ಗೆ ನಾನು ದಾಖಲೆಯನ್ನು ಹಾಜರು ಪಡಿಸಿದ್ದೇನೆ. ಹೊಟ್ಟೆ ಕರಿಯಪ್ಪನಿಗೆ ವಿಭಾಗದಲ್ಲಿ ಸರ್ವೆ ನಂ.16/1, 16/2 ಹಾಗೂ 16/3 ರ ಸ್ವತ್ತುಗಳು ಬಂದಿದ್ದವು. ದಾಸಪ್ಪನಿಗೆ ಸಹಾ ಸರ್ವೆ ನಂ. 16/1, 16/2 ಹಾಗೂ 1/3 ರಲ್ಲಿನ ಸ್ವತ್ತುಗಳು ಬಂದಿದ್ದವು. ಸರ್ವೆ ನಂ. 16/1 ರ ಒಟ್ಟು ವಿಸ್ತೀರ್ಣ 4 ಎಕರೆ. ಅದರಲ್ಲಿ 4 ಎಕರೆ ಜಮೀನು ನನ್ನ ತಾತನ ಪಾಲಿಗೆ ಬಂದಿತ್ತು. ಸರ್ವೆ ನಂ. 16/1 ರಲ್ಲಿ ಹೊಟ್ಟೆ ಕರಿಯಪ್ಪನ ಪಾಲಿಗೂ ಸಹ 4 ಎಕರೆ ಜಮೀನು ಹೋಗಿತ್ತು. ಸರ್ವೆ ನಂ. 16/2 ರಲ್ಲಿ ನನ್ನ ತಾತ ದಾಸಪ್ಪನ ಪಾಲಿಗೆ ಹಾಗೂ ಹೊಟ್ಟೆ ಕರಿಯಪ್ಪನ ಪಾಲಿಗೆ ತಲಾ 2 ಎಕರೆ 30 ಗುಂಟೆ ಜಮೀನು ಬಂದಿತ್ತು. ಸರ್ವೆ ನಂ. 16/3 ರಲ್ಲಿ ನನ್ನ ತಾತ ದಾಸಪ್ಪನ ಪಾಲಿಗೆ ಹಾಗೂ ಹೊಟ್ಟೆ ಕರಿಯಪ್ಪನ ಪಾಲಿಗೆ ತಲಾ 6 ಎಕರೆ 7 ಗುಂಟೆ ಜಮೀನು ಬಂದಿತ್ತು.

ಹೊಟ್ಟೆ ಕರಿಯಪ್ಪನ ಪಾಲಿಗೆ ಹೋಗಿದ್ದ ಜಮೀನುಗಳನ್ನು ನನ್ನ ತಮ್ಮನೇ ಅನುಭವಿಸುತ್ತಿದ್ದಾನೆ. ನನ್ನ ತಾತ ದಾಸಪ್ಪನ ಪಾಲಿನ ಆಸ್ತಿಗಳನ್ನು ಆತನ ಅಣ್ಣನ ಹೆಣ್ಣು ಮಕ್ಕಳು ಅನುಭವಿಸುತ್ತಿದ್ದಾರೆ. ಹೊಟ್ಟೆ ಕರಿಯಪ್ಪನ ಹೆಣ್ಣು ಮಕ್ಕಳ ಹೆಸರು ತಿಮ್ಮಕ್ಕ ಹಾಗೂ ಹಾಲಮ್ಮ. ನಾಗವೇಣಿ ನನ್ನ ತಮ್ಮನ ಮಗಳು . 3 ನೇ ಪ್ರತಿವಾದಿ ನನ್ನ ವಿರುದ್ಧ ಹಾಗೂ ಆಕೆಯ ತಂದೆಯ ವಿರುದ್ಧ ಇದೇ ನ್ಯಾಯಾಲಯದಲ್ಲಿ ಓ ಎಸ್ 33/2012 ಎನ್ನುವ ದಾವೆ ಹೂಡಿದ್ದಳು ಎಂದರೆ ಸರಿ. ಹೊಟ್ಟೆ ಕರಿಯಪ್ಪನಿಗೆ ಹೆಣ್ಣು ಮಕ್ಕಳು ಇರುವ ಕಾರಣ ಅವರ ಪಾಲಿನ ಸ್ವತ್ತಿನಲ್ಲಿ ನನಗಾಗಲೀ ಮೃತ 1 ನೇ ಪ್ರತಿವಾದಿಗಾಗಲೀ ಯಾವುದೇ ಹಕ್ಕು ಬರುವುದಿಲ್ಲ ಎಂದರೆ ಸಾಕ್ಷಿ ಹೊಟ್ಟೆ ಕರಿಯಪ್ಪನಿಗೆ ಗಂಡು ಮಕ್ಕಳಿಲ್ಲದ ಕಾರಣ ಅವರ ಮೃತಪಟ್ಟಾಗ ನನ್ನ ತಂದೆ ಶಾಸ್ತ್ರ ಮಾಡಿದ್ದರಿಂದ ಅವರ 2 ಎಕರೆ 30 ಗುಂಟೆ ಜಮೀನಿನಲ್ಲಿ ನಮಗೆ ಹಕ್ಕು ಇದೆ.

ದಾವಾ ಐಟಂ ನಂ. 3 ರ ಸ್ವತ್ತು ಪಿ ಎಲ್ ಡಿ ಬ್ಯಾಂಕ್ ಗೆ ಅಡಮಾನವಾಗಿತ್ತು ಎಂದರೆ ಸರಿ. ಆ ಕಾರಣದಿಂದ ಮೃತ 1 ನೇ ಪ್ರತಿವಾದಿ ಸರ್ವೆ ನಂ.16/3 ರಲ್ಲಿನ 3 ಎಕರೆ 14 ಗುಂಟೆ ಜಮೀನನ್ನು 2 ನೇ

ಪ್ರತಿವಾದಿಗೆ ಮಾರಾಟ ಮಾಡಿ ಆ ಸಾಲವನ್ನು ತೀರುವಳಿ ಮಾಡಿದ್ದಾನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತಾನು ಆ ಸಾಲವನ್ನು ತೀರಿಸಿರುವುದಾಗಿ ಉತ್ತರಿಸುತ್ತಾರೆ . ಮೃತ 1 ನೇ ಪ್ರತಿವಾದಿ ಹಾಗೂ ಆತನ ಮಗ ಎಲ್ ನರಸಿಂಹ ಮೂರ್ತಿ 2 ನೇ ಪ್ರತಿವಾದಿಗೆ ಬರೆದುಕೊಟ್ಟ ಕ್ರಯ ಪತ್ರವನ್ನು ನಾನು ಓದಿದ್ದೇನೆ. ಈ ದಾವೆ ಹೂಡಿದ ನಂತರ ಆ ಕ್ರಯಪತ್ರವನ್ನು ನಾನು ಓದಿದ್ದೇನೆ ಪಿ ಎಲ್ ಡಿ ಬ್ಯಾಂಕಿನ ಸಾಲವನ್ನು ತಾನು ತೀರುವಳಿ ಮಾಡಿದ್ದೇನೆ ಎಂದು ಮೃತ 1 ನೇ ಪ್ರತಿವಾದಿ ಹಾಗೂ ಆತನ ಮಗ 2 ನೇ ಪ್ರತಿವಾದಿಗೆ ಬರೆದುಕೊಟ್ಟ 15.10.1998 ರ ಕ್ರಯ ಪತ್ರದಲ್ಲಿ ಬರೆದಿದ್ದಾರೆ ಎಂದರೆ ಸಾಕ್ಷಿ ಬರೆದಿರಬಹುದು ಎಂದು ಉತ್ತರಿಸುತ್ತಾರೆ.

ಮೃತ 1 ನೇ ಪ್ರತಿವಾದಿ ಹಾಗೂ ಆತನ ಮಗ ದಾವಾ ಐಟಂ ನಂ. 3 ರಲ್ಲಿನ 3 ಎಕರೆ 14 ಗುಂಟೆ ಜಮೀನನ್ನು ಪಿ ಎಲ್ ಡಿ ಬ್ಯಾಂಕಿನ ಸಾಲ ತೀರುವಳಿಗಾಗಿ 2 ನೇ ಪ್ರತಿವಾದಿಗೆ ಮಾರಾಟ ಮಾಡಿಲ್ಲ ಎಂದು ನಿಮ್ಮ ವಾದ ಪತ್ರದಲ್ಲಿ ಹೇಳಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಆ ಮಾರಾಟ ಮಾಡಿರುವ ವಿಚಾರವೇ ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಹೊಟ್ಟೆ ಕರಿಯಪ್ಪನವರು ತಿಥಿ ಕರ್ಮಾಂತರವನ್ನು ಮಾಡಲು ದಾವಾ ಐಟಂ ನಂ. 2 ರ ಸ್ವತ್ತನ್ನು ನನ್ನ ತಾತ ದಾಸಪ್ಪನಿಗೆ ಕೊಟ್ಟಿದ್ದರು ಎಂದು ನನ್ನ ವಾದ ಪತ್ರದಲ್ಲಿ ಹೇಳಿದ್ದೇನೆ

ದಾವಾಸ್ತಿಗಳು ನನ್ನ ತಾತನ ಸಹೋದರ ಹೊಟ್ಟೆ ಕರಿಯಪ್ಪನ ಪಾಲಿಗೆ ಹೋಗಿದ್ದುದರಿಂದ ಅದರಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಬೆಂಗಳೂರಿನಲ್ಲಿ ಕಳೆದ 28 ವರ್ಷಗಳಿಂದ ವಾಸವಾಗಿದ್ದೇನೆ. ಮೃತ 1 ನೇ ಪ್ರತಿವಾದಿಗೆ ದಾವಾ ಐಟಂ ನಂ. 3 ರಲ್ಲಿ ಹಕ್ಕು ಹೇಗೆ ಬಂತು ಎನ್ನುವುದನ್ನು ತಿಳಿದುಕೊಂಡು 2 ನೇ ಪ್ರತಿವಾದಿ ಅವರಿಂದ 3 ಎಕರೆ 14 ಗುಂಟೆ ಜಮೀನನ್ನು ಕ್ರಯಕ್ಕೆ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ಕ್ರಯದ ಬಗ್ಗೆ 2 ವರ್ಷಗಳ ಮುಂಚೆ ನನಗೆ ಗೊತ್ತಾಯಿತು ಎಂದು ಉತ್ತರಿಸುತ್ತಾರೆ.

ಕುಟುಂಬದ ಸಾಲ ತೀರುವಳಿಗಾಗಿ ಹಾಗೂ ಪಿ ಎಲ್ ಡಿ ಬ್ಯಾಂಕಿನ ಸಾಲ ತೀರುವಳಿಗಾಗಿ ಮೃತ 1 ನೇ ಪ್ರತಿವಾದಿ ಹಾಗೂ ಆತನ ಮಗ ದಾವಾ ಐಟಂ ನಂ. 3 ರಲ್ಲಿನ 3 ಎಕರೆ 14 ಗುಂಟೆ ಜಮೀನನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.3 ರ ಸ್ವತ್ತಿನ ಮೇಲೆ ಸಾಲ ಇದೆ

ಅದನ್ನು ತೀರುವಳಿ ಮಾಡಿ ಎಂದು ಪಿ ಎಲ್ ಡಿ ಬ್ಯಾಂಕಿನಿಂದ ನನಗೆ ನೋಟೀಸ್ ಬಂದಿತ್ತು. ಆ ನೋಟೀಸ್ ಪ್ರತಿಯನ್ನು ಹಾಗೂ ಆ ಬ್ಯಾಂಕಿನ ಸಾಲವನ್ನು ನಾನೇ ತೀರುವಳಿ ಮಾಡಿದ ಬಗ್ಗೆ ಇರುವ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

ನಾನು ಎಂದೂ ಪಿ ಎಲ್ ಡಿ ಬ್ಯಾಂಕಿನ ಸಾಲವನ್ನು ತೀರುವಳಿ ಮಾಡಿಲ್ಲ ಎಂದರೆ ಸರಿಯಲ್ಲ. ಆ ಸಾಲ ನಾನೇ ತೀರುವಳಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.3 ರ ಸ್ವತ್ತು ನಮ್ಮ ಪಿತ್ರಾರ್ಜಿತ ಹಾಗೂ ಒಟ್ಟು ಕುಟುಂಬಂದ ಆಸ್ತಿ ಅಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಖರೀದಿಸಿರುವ ಸ್ವತ್ತನ್ನು ಲಪಟಾಯಿಸಲು ಹಾಗೂ ಅವರಿಗೆ ನಷ್ಟ ಉಂಟು ಮಾಡಲು ಮೊದಲು 3 ನೇ ಪ್ರತಿವಾದಿಯಿಂದ ದಾವೆ ಹೂಡಿಸಿ ಅದು ವಜಾಗೊಂಡ ನಂತರ ನಾನೇ ಈ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

ದಾವಾ ಐಟಂ ನಂ.3 ರಲ್ಲಿ ನನಗೆ ಹಕ್ಕಾಗಲೀ, ಪಾಲಾಗಲಿ ಇಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿದಿವಾಗೆ ಮೃತ 1 ನೇ ಪ್ರತಿವಾದಿ ಹಾಗೂ ಆತನ ಮಗ ನರಸಿಂಹ ಮೂರ್ತಿ ದಾವಾ ಐಟಂ ನಂ. 3 ರಲ್ಲಿನ 3 ಎಕರೆ 14 ಗುಂಟೆ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದು ಗೊತ್ತಾದ ನಂತರ 1 ನೇ ಪ್ರತಿವಾದಿಯ ಮಗ ನರಸಿಂಹ ಮೂರ್ತಿಯನ್ನು ನಾನು ಈ ದಾವೆಯಲ್ಲಿ ಪಕ್ಷಗಾರನನ್ನಾಗಿ ಮಾಡಿಲ್ಲ. 2 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಆಕೆಯ ವಿರುದ್ಧ ನಾನು ಈ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ದಾವಾ ಐಟಂ ನಂ. 3 ರ 3 ಎಕರೆ 14 ಗುಂಟೆ ಜಮೀನಿನ ನ್ಯಾಯ ಸಮ್ಮತಿ ಖರೀದಿದಾರರಾಗಿದ್ದಾರೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಪ್ರತಿವಾದಿ ಸಂಖ್ಯೆ 1(ಎ) ರಿಂದ 1(ಸಿ) ಪರ ಶ್ರೀ ಹೆಚ್ ಎಸ್ ಕೆ ವಕೀಲರಿಂದಃ**

(ಈ ಹಂತದಲ್ಲಿ ಸಾಕ್ಷಿಯ ಪಾಟೀ ಸವಾಲಿಗೆ ಪ್ರತಿವಾದಿ 1(ಎ) ರಿಂದ 1(ಸಿ) ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು).

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.